ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ ನ್ಯಾಯಾಲಯ

**ಸಿ.ಸಿ. ನಂ.742/2017**

ಸಿ ಡಬ್ಲ್ಯು 5, ಪಿಡಬ್ಲ್ಯು2 .

ಸಾಕ್ಷಿದಾರರ ಹೆಸರು :- ಅಸಗರಅಲಿ ಹೆಚ್ ನದಾಫ್

ವಯಸ್ಸು :- 40 ವರ್ಷಗಳು

ಉದ್ಯೋಗ :- ಸಿಪಿಸಿ

ವಾಸಸ್ಥಳ :- ಸವಣೂರು

ದಿನಾಂಕಃ 14-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ- ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

2010 ರಿಂದ 2018 ರವರೆಗೆ ನಾನು ತಡಸ ಪೋಲಿಸ ಠಾಣೆಯಲ್ಲಿ ಸಿಪಿಸಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 19-08-2017 ರಂದು ನಾನು ಠಾಣೆಯಲ್ಲಿ ಇದ್ದಾಗ 10.00 ಗಂಟೆಗೆ ಚಾಸಾ 1 ರವರು ನನಗೆ ಮತ್ತು ಚಾಸಾ3 , 4 ಅವರಿಗೆ ಕರಿಸಿ ಶಿಗ್ಗಾವ ಎನ್ ಎಚ್ 4 ಇಂದ ನೀರಲಗಿ ಹೋಗುವ ಕ್ರಾಸನಲ್ಲಿ ರಸ್ತೆಯ ಮೇಲೆ ಯಾರೋ ಪಾಸ ವ ಪರಮಿಟ ಇಲ್ಲದೇ ಅಕ್ರಮವಾಗಿ ಸರಾಯಿ ಸಾಗಾಟ ಮಾಡುತಿದ್ದಾರೆ ಎಂದು ಬಾತ್ಮಿ ಬಂತು ಎಂದು ಚಾಸಾ-1 ರವರು ಹೇಳಿ ರೇಡಗೆ ಹೋಗಲು ತಿಳಿಸಿದರು. ಆಗ ಚಾಸಾ-1 ರವರು ಪಂಚರಾದ ಚಾಸಾ-2, 3 ರವರನ್ನು ಕರೆಸಿ ರೇಡ ಹೋಗುವ ವಿಷಯ ತಿಳಿಸಿ ಪಂಚರಾಗಿ ಸಹಕರಿಸಲು ಕೇಳಿದ್ದು ಅವರು ಒಪ್ಪಿಕೊಂಡರು. ಕೆ ಎ 27-ಜಿ 152 ವಾಹನ ಮತ್ತು ಅದರ ಚಾಲಕರ ಸಹಿತ ನಾವು 10.15 ಕ್ಕೆ ಠಾಣೆ ಬಿಟ್ಟು ಮುತ್ತಳ್ಳಿ ತಡಸ ಕ್ರಾಸ ತಿಮ್ಮಾಪುರ ಮಾರ್ಗವಾಗಿ ನೀರಲಗಿ ಕ್ರಾಸ ನೀರಲಗಿ ರಸ್ತೆ ಮೇಲೆ ಎಮ್ ಎಸ್ ಪಾಟೀಲ ಅವರ ಹೊಲದಲ್ಲಿ ಇರುವ ಇಟ್ಟಂಗಿ ಬಟ್ಟಿ ಎದುರುಗಡೆ ಒಬ್ಬ ವ್ಯಕ್ತಿ ಬಿಳಿ ಚೀಲದಲ್ಲಿ ಬಾಕ್ಸ ತರಹ ಹೊತ್ತಿಕೊಂಡು ಹೊಗುತಿದ್ದರು. ಆಗ ನಾವು ಸಮೀಪಕ್ಕೆ ಹೋದಾಗ ನಮ್ಮನ್ನು ನೋಡಿ ಚೀಲವನ್ನು ಕೆಳಗೆ ಒಗೆದು ಹೊಲದಲ್ಲಿ ಒಡಿ ಹೋದರು. ನಾವು ಜೀಪ ನಿಲ್ಲಿಸಿ ಅವನನ್ನು ಬೆನ್ನು ಹತ್ತಿ ಹಿಡಿದೆವು ಆಗ ಚಾಸಾ-1 ರವರು

ಏಕೆ ಒಡುತಿದ್ದಿಯಾ ಎಂದು ಕೇಳಿದ್ದು ಆಗ ಸಮಯ 10.45 ಆಗಿತ್ತು . ಚಾಸಾ-1 ರವರು ಚೀಲವನ್ನು ಬಿಚ್ಚಿ ನೋಡಿದಾಗ 90 ಎಮ್ ಎಲ್ 96 ಬೆಂಗಳೂರು ಮಾಲ್ಟ ವಿಸ್ಕಿ ಪೌಚಗಳು ಇದ್ದವು .ಪಂಚರ ಸಮಕ್ಷಮ ಅವುಗಳನ್ನು ತೋರಿಸಿ ಸದರಿ ಆರೋಪಿಯ ಹೆಸರು ಕೇಳಲಾಗಿ ಪ್ರಕಾಶ ಕುಂಬಾರ ಸಾಃ ನೀರಲಗಿ ಎಂದು ಹೇಳಿದನು. ಪಾಸ ವ ಪರಮಿಟ ಇಲ್ಲ ಎಂದು ಹೇಳಿದನು . ಚಾಸಾ-1 ರವರು 10.15 ರಿಂದ 11.45 ರವರೆಗೆ ಪಂಚರ ಸಮಕ್ಷಮ ಮಾಡಿ ಜಪ್ತು ಮಾಡಿದರು . ಮು ಮಾಗಳನ್ನು ಚೀಲದಲ್ಲಿ ಹಾಕಿ ಸೀಲ ಮಾಡಿದರು ನಂತರ ಆರೋಪಿ , ಮು ಮಾಗಳನ್ನು ಠಾಣೆಗೆ ಹಾಜರುಪಡಿಸಿ ಚಾಸಾ1 ರವರು ಸರಕಾರಿ ತರ್ಫೆ ದೂರನ್ನು ಸಲ್ಲಿಸಿದರು. ದಿ 19-08-2017 ರಂದು ತನಿಕಾದಿಕಾರಿ ಮುಂದೆ ಹೇಳಿಕೆ ನೀಡಿದ್ದೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿ ಮತ್ತು ಮು ಮಾಗಳನ್ನು ನೋಡಿ ಗುರುತಿಸುತ್ತೇನೆ . ಮು ಮಾಗಳನ್ನು ಈಗಾಗಲೇ ಮು ಮಾ-1 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ</u> ಆರೋಪಿತರ ಪರ ಶ್ರೀ ಎ ಎಸ್ ಡಿ ವಕೀಲರಿಂದ

ಚಾಸಾ 1 ರವರು ನೀರಲಗಿ ಕ್ರಾಸ ಗೆ ರೇಡಗೆ ಹೋಗೋಣ ಬಾ ಎಂದು ಹೇಳಿದರು . ಪಂಚರನ್ನು ಚಾಸಾ-1 ರವರು ತಡಸನಿಂದ ಪೋನ ಮಾಡಿ ಕರೆಸಿದರು . ಬಾತ್ಮಿ ಬಂದ ನಂತರ 10.45 ಕ್ಕೆ ಘಟನಾ ಸ್ಥಳಕ್ಕೆ ಹೋದೆವು. ಠಾಣೆ ಇಂದ ನೀರಲಗಿ ಕ್ರಾಸ 11 ಕಿ ಮಿ ಆಗುತ್ತದೆ .ನಮ್ಮನ್ನು ನೋಡಿ 100 ಮೀಟರ ಒಡಿ ಹೋದ . 10.45 ರಿಂದ 11.45 ರವರೆಗೆ ಪಂಚನಾಮೆ ಮಾಡಿದ್ದಾರೆ. ಮು ಮಾತರಹ ಟೆಟ್ರಾ ಪ್ಯಾಕಗಳು ಎಲ್ಲಾ ಕಡೆ ಸಿಗುತ್ತವೆ ಎಂದರೆ ಸರಿ. ನ್ಯಾಯಾಲಯದ ಮುಂದೆ ಬಿಳಿ ಚೀಲ ಬಾಕ್ಸಗಳು ಇಲ್ಲ ಎಂದರೆ ಸರಿಯಲ್ಲ. ಬಿಳಿ ಚೀಲವನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಮು ಮಾಗಳಿಗೆ ಆರೋಪಿತರಿಗೆ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಸ್ಥಳದಲ್ಲಿ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ರೇಡಗೆ ಹೋಗಿಲ್ಲ ಎಂದರೆ ಸರಿಯಲ್ಲ. ಆರೋಪಿತ ವಿರುದ್ದ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಸುಳ್ಳು ದೂರನ್ನು

ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ.ಸರಿ.ಇದೆ.

ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.